ಓ.ಎಸ್. ನಂ.*53/2016*

ಪಿ.ಡಬ್ಲು-*1*

ಸಾಕ್ಷಿಯನ್ನು ಇಂದು ದಿನಾಂಕಃ *21.04.2023* ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು

**<u>ಪಾಟೀ ಸವಾಲು ಪ್ರತಿವಾದಿ ನಂ.೧ ರಿಂದ ೬ ಪರ ಶ್ರೀ ಬಿ.ಎ.ಡಿ. ವಕೀಲರಿಂದ</u>**

ಪ್ರತಿವಾದಿ ನಂ.೧ ಮತ್ತು ೨ ರವರ ಅಡ್ಡ ಹೆಸರು ಕಿವಡೇ ಇರುತ್ತದೆ ಎಂದರೆ ಸರಿ ಅಲ್ಲ. ಪ್ರತಿವಾದಿ ನಂ.೧ ಮತ್ತು ೨ ರವರ ಅಡ್ಡ ಹೆಸರು ಏನಿದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.೩ ನನಗೆ ಸಂಬಂಧಿ ಅಲ್ಲ. ಪ್ರತಿವಾದಿ ನಂ.೩ ಪ್ರತಿವಾದಿ ೨ ಮತ್ತು ೧ ರವರಿಗೆ ಏನಾಗಬೇಕು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.೩ ರಿಂದ ೬ ರವರು ನರೋಣಾ ಗ್ರಾಮದ ನಿವಾಸಿಗಳು ಇರುತ್ತಾರೆ ಎಂಥರೆ ಸರಿ. ಪ್ರತಿವಾದಿ ನಂ.೧ ಮತ್ತು ೨ ರವರ ಅಡ್ಡ ಹೆಸರು ಕಿವಡೇ ಇರುತ್ತದೆ ಅವರೂ ಸಹ ನರೋಣಾ ಗ್ರಾಮದ ನಿವಾಸಿಗಳು ಇರುತ್ತಾರೆ ಎಂದರೆ ಸರಿ ಅಲ್ಲ. ನನ್ನ ತಂದೆಯ ತಂದೆ ಹೆಸರು ತುಳಜಪ್ಪ ಇರುತ್ತದೆ ಎಂದರೆ ಸರಿ. ನನ್ನ ಅಜ್ಜ ತುಳಜಪ್ಪನ ತಂದೆಯ ಹೆಸರು ಮಲ್ಕಪ್ಪ ಎಂದರೆ ಸರಿ. ಮಲ್ಕಪ್ಪನ ತಾಯಿ ಹೆಸರು ಅಂದವ್ವ ಇರುತ್ತದೆ ಎಂದರೆ ಸರಿ. ಅಂದವ್ವನ ಅಣ್ಣನ ಹೆಸರು ತುಕಾರಾಮ ಇರುತ್ತದೆ ಎಂದರೆ ಸರಿ ಅಲ್ಲ. ತುಕಾರಾಮನ ಮಗನ ಹೆಸರು ದೇವಪ್ಪ ಎಂದರೆ ನನಗೆ ಗೊತ್ತಿಲ್ಲ. ದೇವಪ್ಪನಿಗೆ ಚಿದಾನಂದ ಮತ್ತು ಶಿವಮೂರ್ತಿ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂ.೧ ಮತ್ತು ೨ ಚಿದಾನಂದನ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಯಲ್ಲಿ ಕಟ್ಟಡ ಕಟ್ಟಿದ ಜಾಗ ಮಾತ್ರ ನಮ್ಮದು ಇರುತ್ತದೆ, ಖುಲ್ಲಾ ಜಾಗೆ ನಮ್ಮದಲ್ಲ ಎಂದರೆ ಸರಿ ಅಲ್ಲ. ನಾನು ಕಟ್ಟಡ ಕಟ್ಟಿದ ಕಟ್ಟಡದ ಪಶ್ಚಿಮ ದಿಕ್ಕಿಗೆ ರಸ್ತೆ ಇರುತ್ತದೆ ಎಂದರೆ ಸರಿ. ಉತ್ತರ ಮತ್ತು ದಕ್ಕಿಣ ದಿಕ್ಕಿಗೆ ಸಂಧಿ ಇರುತ್ತದೆ ಎಂದರೆ ಸರಿ. ಉತ್ತರ ದಿಕ್ಕಿಗೆ ಭೀಮಶಾ ಕಿವಡೆ ಇವರ ಮನೆ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದ ಗೋಡೆ ಒಂದಕ್ಕೊಂದು ಹತ್ತಿಕೊಂಡಿರುತ್ತವೆ ಎಂದು ನುಡಿಯುತ್ತಾರೆ. ಭೀಮಶಾ ಕಿವಡೆ ಅವರ ಮನೆಯ ಉತ್ತರ ದಿಕ್ಕಿಗೆ ಚಂದಪ್ಪ ಕಿವಡೆ ಇವರ ಮನೆ ಇರುತ್ತದೆ. ಸಾಕ್ಷಿ ಮುಂದುವರೆದು ಅವರ ಮನೆಯು ಕೂಡ ಒಂದಕ್ಕೊಂದು ಹತ್ತಿಕೊಂಡಿರುತ್ತವೆ ಎಂದು ನುಡಿಯುತ್ತಾರೆ. ಚಂದಪ್ಪ ಕಿವಡೆ ಅವರ ಮನೆಯ ಉತ್ತರ ದಿಕ್ಕಿಗೆ 6 ಫೂಟು ಸಂಧಿ ಬರುತ್ತದೆ ಎಂದರೆ ಸರಿ. ಸದರಿ 6 ಫೂಟು ಸಂಧಿಗೆ ಹೊಂದಿಕೊಂಡು ಶರಣಪ್ಪ ಕೋರೆ ರವರ ಮನೆ ಇರುತ್ತದೆ ಎಂದರೆ ಸರಿ. ಶರಣಪ್ಪ ಕೋರೆ ರವರ ಮನೆಯ ಉತ್ತರ ದಿಕ್ಕಿಗೆ ಪ್ರತಿವಾದಿ ನಂ.೧ ರವರ ಪತ್ರಾ ಶೆಡ್ಡು ಇರುತ್ತದೆ ಎಂದರೆ ಸರಿ ಅಲ್ಲ. ಮುಂದುವರೆದು ನನ್ನ ಪತ್ರಾ ಶೆಡ್ಡು ಇರುತ್ತದೆ ಎಂದು ನುಡಿಯುತ್ತಾರೆ. ಶರಣಪ್ಪ ಕೋರೆರವರ ಮನೆ ಮತ್ತು ಪತ್ರಾ ಶೆಡ್ಡುಗಳ ದಕ್ಷಿಣ ದಿಕ್ಕಿಗೆ ಸಂಧಿ ಬರುತ್ತದೆ ಎಂದರೆ ಸರಿ.

ನನ್ನ ಕಟ್ಟಡದ ಮನೆಯ ಉತ್ತರ ದಿಕ್ಕಿಗೆ ಅಣ್ಣಪ್ಪ ಕಿವಡೆ ಅವರ ಮನೆ ಮತ್ತು ಖುಲ್ಲಾ ಜಾಗೆ ಇರುತ್ತದೆ ಎಂದರೆ ಸರಿ ಅಲ್ಲ. ನನ್ನ ಕಟ್ಟಡದ ಮನೆಯ ಉತ್ತರ ದಿಕ್ಕಿಗೆ ಸಂಧಿಗೆ ಹೊಂದಿಕೊಂಡು ಸಂಬಣ್ಣ ಮದಲಿ ಇವರ ಮನೆ ಇರುತ್ತದೆ. ಸದರಿ ಸಂಬಣ್ಣ ಮದಲಿ ಅವರ ಮನೆಯ ಪೂರ್ವ ದಿಕ್ಕಿಗೆ ಸಂಧಿ ಆದ ನಂತರ ಪೀರಪ್ಪ ಮದಲಿ ರವರ ಮನೆ ಬರುತ್ತದೆ ಎಂದರೆ ಸರಿ. ಪೀರಪ್ಪ ಮದಲಿ ಅವರ ಮನೆಯ ಪೂರ್ವ ದಿಕ್ಕಿಗೆ ದಶರಥ ಮದಲಿ ರವರ ಮನೆ ಬರುತ್ತದೆ ಎಂದರೆ ಸರಿ. ದಶರಥ ಮದಲಿ ಅವರ ಮನೆಯ ಪೂರ್ವ ದಿಕ್ಕಿಗೆ ಚಿಕ್ಕ ಸಂಧಿ ನಂತರ ಸೋಮಣ್ಣರವರ ಮನೆ ಬರುತ್ತದೆ ಎಂದರೆ ಸರಿ. ಸೋಮಣ್ಣ ರವರ ಮನೆಯ ಪೂರ್ವ ದಿಕ್ಕಿಗೆ ಪುತಳಾಬಾಯಿಯವರ ಮನೆ ಬರುತ್ತದೆ ಎಂದರೆ ಸರಿ.

ದಾವಾ ಆಸ್ತಿಗೆ ಹೊಂದಿಕೊಂಡು ನನ್ನ ಕಟ್ಟಡ ಮನೆ ಇರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಅದು ನಮ್ಮ ಜಾಗೆ ಇರುತ್ತದೆ ಎಂದು ನುಡಿಯುತ್ತಾರೆ. ಪಂಚಾಯತಿಯವರು ಸದರಿ ಖುಲ್ಲಾ ಜಾಗೆಗೆ ಬೇರೆ ನಂಬರ್ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕೊಟ್ಟಿರುತ್ತಾರೆ ಅದು

ಏನು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪಂಚಾಯತಿಗೆ ಕರವನ್ನು ಮನೆಯದ್ದು ಮಾತ್ರ ಕಟ್ಟಿರುತ್ತೇನೆ, ಖುಲ್ಲಾ ಜಾಗೆಯದ್ದು ಕಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಎರಡೂ ಕೂಡೇ ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಪಂಚಾಯತಿಗೆ ಮನೆ ನಂ.11-56 ರ ಕರವನ್ನು ಕಟ್ಟಿರುತ್ತೇನೆ ಎಂಧರೆ ಸಾಕ್ಷಿಯು ನಾನು ಒಟ್ಟಿನಲ್ಲಿ ಎಲ್ಲಾ ಕರ ಕಟ್ಟಿರುತ್ತೇನೆ, ಅದು ಯಾವ ಸಂಖ್ಯೆ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪಂಚಾಯತಿಗೆ ಕಟ್ಟಡ ಮಾಡಲು ಅನುಮತಿ ಕೊಡಿ ಎಂದು ಅರ್ಜಿಯನ್ನು ಸಲ್ಲಿಸಿರುತ್ತೇನೆ, ಅದು ಎಷ್ಟು ವರ್ಷ ಆಯಿತು ಎಂದು ನನಗೆ ನೆನಪಿಲ್ಲ. ಸದರಿ ಅರ್ಜಿಯ ಜೊತೆಗೆ ಕಟ್ಟಡದ ನಕಾಶೆಯನ್ನು ಹಚ್ಚಿ ಸಲ್ಲಿಸಿರುತ್ತೇನೆ. ಸದರಿ ನಕ್ಷೆಯನ್ನು ಪಂಚಾಯತಿಯವರೇ ತಯಾರು ಮಾಡಿರುತ್ತಾರೆ. ಪಂಚಾಯತಿಯವರಿಗೆ ನಕಾಶೆಯನ್ನು ತಯಾರಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಾನು ಮಾಹಿತಿ ನೀಡಿದ ನಕಾಶೆಗೆ ಸಹಿಯನ್ನು ಹಾಕಿರುತ್ತೇನೆ. ಕಟ್ಟಡದ ಪರವಾನಿಗೆ ಮಂಜೂರು ಆಗುವಾಗ ಯಾರು ಸೆಕ್ರೆಟರಿ ಇದ್ದರು, ಯಾರು ಅಧ್ಯಕ್ಷರು ಇದ್ದರು ಎಂದು ನನಗೆ ಹೇಳಲು ಆಗುವುದಿಲ್ಲ, ಆಗ ಯಾವ ಅಧ್ಯಕ್ಷರು ಇದ್ದರು ಎಂದರೆ ಸಾಕ್ಷಿಯು ಅವರು ತೀರಿಕೊಂಡಿರುತ್ತಾರೆ ಅವರ ಹೆಸರು ಗುಂಡಪ್ಪ ಇರುತ್ತದೆ ಎಂದು ನುಡಿಯುತ್ತಾರೆ.

ನಿಪಿ-8 ನ್ನು ತೋರಿಸಿ ಸಾಕ್ಷಿಗೆ ಇದರಲ್ಲಿ ಏನು ಕಟ್ಟಡ ಮಾಡುವುದಿದೆ ಎಂದು ತೋರಿಸಿರುವುದಿಲ್ಲ ಎಂದು ಕೇಳಿದಾಗ ಸಾಕ್ಷಿಯು ತೋರಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನಿಪಿ-ಆರಲ್ಲಿ ಕಟ್ಟಡದ ಮನೆಯನ್ನೂ ಸಹ ಕೂಡ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ಅದು ಬೇರೆ, ಇದು ಬೇರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-ಆನ್ನು ತೋರಿಸಿ ಅದರಲ್ಲಿ ಮೂರು ರೀತಿಯ ಪೆನ್ನಿನ ಮಸಿಗಳನ್ನು ಉಪಯೋಗಿಸಿ ತಯಾರಿಸಿದ್ದು ಇರುತ್ತದೆ ಎಂದು ಕೇಳಿದಾಗ ಸಾಕ್ಷಿಯು ಅವರೇ ಬರೆದಿರುತ್ತಾರೆ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ-ಆರಲ್ಲಿ ಯಾವ ತಾರೀಖಿಗೆ ಜಾರಿಗೆ ಬರುತ್ತದೆ ಮತ್ತು ಕಡತ ಸಂಖ್ಯೆಯನ್ನು ಬರೆದಿರುವುದಿಲ್ಲ ಎಂದರೆ ಸರಿ ಅಲ್ಲ. ನಿಪಿ-ಆನ್ನು ಈ ದಾವೆಗೋಸ್ಕರ ಪಂಚಾಯತಿ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ಖೊಟ್ಟಿಯಾಗಿ

ತಯಾರಿಸಿ ಈ ದಾವೆಯಲ್ಲಿ ಹಾಕಿರುತ್ತೇವೆ ಎಂಧರೆ ಸರಿ ಅಲ್ಲ. ನಮ್ಮ ಮತ್ತು ಪ್ರತಿವಾದಿಯರ ನಡುವೆ ಖುಲ್ಲಾ ಜಾಗೆ ಕುರಿತು ತಕರಾರು ಇರುತ್ತದೆ ಎಂಧರೆ ಸರಿ. ಈ ದಾವೆ ಮಾಡುವ ಕಾಲಕ್ಕೆ ಸದರಿ ಜಾಗೆ ಕಿಮ್ಮತ್ತು ಎಷ್ಟು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ನನ್ನ ದಾವೆ ಮಾಡುವ ಕಾಲಕ್ಕೆ ನನ್ನ ವಕೀಲರಿಗೆ ಸದರಿ ಖುಲ್ಲಾ ಜಾಗೆಯ ಕಿಮ್ಮತ್ತು ಎಷ್ಟು ಇತ್ತು ಎಂದು ಹೇಳಿ ಬರೆಸಿರುವುದಿಲ್ಲ. ನಾನು ನನ್ನ ದಾವೆಯಲ್ಲಿ ಸದರಿ ಖುಲ್ಲಾ ಜಾಗೆಯ ಕಿಮ್ಮತ್ತು ರೂ.30000/- ಇರುತ್ತದೆ ಎಂದು ಹೇಳಿ ಬರೆಸಿರುತ್ತೇನೆ ಎಂಧರೆ ಸರಿ ಅಲ್ಲ.

ನನ್ನ ಮಗ ಬಿ.ಎಸ್.ಎಫ್.ನಲ್ಲಿ ಸೇವೆ ಸಲ್ಲಿಸುತ್ತಿದ್ದಾನೆ ಎಂಧರೆ ಸರಿ. ಕಟ್ಟಡದ ಮನೆ ಪೂರ್ವ-ಪಶ್ಚಿಮ 30 ದಕ್ಷಿಣ-ಉತ್ತರ 25ಕ್ಕೆ ಮಾತ್ರ ನಾವು ಮಾಲೀಕರು ಇರುತ್ತೇವೆ ಎಂಧರೆ ಸರಿ ಅಲ್ಲ, ವಿನಾಕಾರಣ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಖೊಟ್ಟಿ ದಾವೆ ದಾಖಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನಾವು ಪ್ರತಿವಾದಿಯರ ವಿರುದ್ದ ಹೂಡಿರುವ ಕ್ರಿಮಿನಲ್ ಸ್ವರೂಪದ ಪ್ರಕರಣದಲ್ಲಿ ಪ್ರತಿವಾದಿಯರು ಬಿಡುಗಡೆ ಆಗಿರುತ್ತಾರೆ ಎಂದರೆ ಸರಿ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಆಳಂದ.